**ಸಾಕ್ಷಿಯನ್ನು ಈ ದಿನ ದಿಃ 05.04.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ದಿಃ 24.01.2024 ರ ಆದೇಶದಂತೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ನನ್ನ ತಾಯಿಯ ಮನೆ ಹಳೆ ಕೆಂಪಯ್ಯನ ಹುಂಡಿ. ನಾನು ಮದುವೆಯಾಗಿ ಬಂದ ನಂತರ ಹೆಚ್ಚು ಕೆಂಪಯ್ಯನಹುಂಡಿಯಲ್ಲೇ ಇರುತ್ತಿದ್ದೆ ಎನ್ನುವುದು ಸರಿ. ಅಲ್ಲಿಂದ ನಾನು ಟಿ ನರಸೀಪುರಕ್ಕೆ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದೆ ಎನ್ನುವುದು ಸರಿ. ಅಲ್ಲಿಗೆ ನನ್ನ ಗಂಡ ಅಂದರೆ ಆರೋಪಿ ಬಂದು ಹೋಗಿ ಮಾಡುತ್ತಿದ್ದರು ಎನ್ನುವುದು ಸರಿ. ಬನ್ನಹಳ್ಳಿಯಲ್ಲಿ, ನಾವು ಮತ್ತು ನಮ್ಮ ಭಾವ ಹಾಗೂ ಅವರ ಕುಟುಂಬ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೆವು ಎನ್ನುವುದು ಸರಿ. ನನ್ನ ಅತ್ತೆ ಮಾವ ನಮ್ಮ ಜೊತೆಯಲ್ಲಿ ಇರಲಿಲ್ಲ. ನಮ್ಮ ಭಾವನವರೊಂದಿಗೆ ಇದ್ದರು. ನನ್ನ ಹಾಗೂ ನನ್ನ ಗಂಡನ ನಡುವೆ ಬಹಳ ಮನಸ್ತಾಪಗಳು ಇದ್ದವು. ಆತ ದಿನಾಲೂ ಕುಡಿದು ಬರುತ್ತಿದ್ದರು. ಹಾಗಾಗಿ ನಾನು ಹೆಚ್ಚು ನನ್ನ ತಾಯಿಯ ಮನೆಯಲ್ಲೇ ಇರುತ್ತಿದ್ದೆ ಎನ್ನುವುದು ಸರಿ.

2. ನನ್ನ ಅತ್ತೆ ಮೃತ ಪಡುವ 3 ತಿಂಗಳ ಹಿಂದೆ ನನ್ನ ಗಂಡನಿಗೆ ಅಪಘಾತವಾಗಿತ್ತು ಎನ್ನುವುದು ಸರಿ. ಆತ ಬೈಕಿನಲ್ಲಿ ಬರುವಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದರು. ಆಗ ಅವರ ತಲೆ ಮತ್ತು ಕಿವಿಯಿಂದ ರಕ್ತ ಸೋರಿತ್ತು. ಕೆ.ಆರ್ ಆಸ್ಪತ್ರೆಯಲ್ಲಿ ತೋರಿಸಿದ್ದರು. ಅಲ್ಲಿ ಸುಮಾರು ಒಂದು ವಾರ ದಾಖಲಾಗಿದ್ದರು. ನಂತರ ಬಂದು ಹೋಗಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಆಗ ಚಿಕಿತ್ಸೆಗಾಗಿ ಆರೋಪಿಯ ತಾಯಿ ಲಕ್ಷಮಮ್ಮನವರೇ ದುಡ್ಡು

ಕೊಡುತ್ತಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ನಾವೇ ಖರ್ಚು ಮಾಡುತ್ತಿದ್ದೆವು ಎಂದು. ಕೆ ಆರ್ ಆಸ್ಪತ್ರೆಯ ವೈದ್ಯರು **NIMHANS** ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದರು. ಆದರೆ ನಮಗೆ ಅಲ್ಲಿಗೆ ಕರೆದುಕೊಂಡು ಹೋಗಲು ಆಗಿರಲಿಲ್ಲ. ನಮ್ಮ ಮನೆಯಲ್ಲಿ ಯಾವ ಗಂಡಸರು ಇರಲಿಲ್ಲ.

3. ಈ ಪ್ರಕರಣದ ಸಂಬಂಧ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ , "ನಮ್ಮ ಅತ್ತೆ ನಾನೂ ಕೂಡ ಸ್ವಲ್ಪ ಹಣ ಒದಗಿಸಿಕೊಡುತ್ತೇನೆ , ಆಸ್ಪತ್ರೆಗೆ ತೋರಿಸು ಎಂದು ನನ್ನ ಗಂಡನಿಗೆ ಹೇಳಿದ್ದರು" ಎಂದು ನಾನು ಹೇಳಿರುವುದಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ಸ್ಕ್ಯಾನ್ ಮಾಡಿಸಲಾಗಿತ್ತು.

4. ನಿಮ್ಮ ಅತ್ತೆ ಮೃತ ಪಡುವ ಮೊದಲು ನಿಮ್ಮ ಗಂಡ ತಲೆ ನೋವು ಇತ್ತೀಚೆಗೆ ಹೆಚ್ಚಾಗುತ್ತಿದೆ , ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳುತ್ತಿದ್ದರು ಎನ್ನುವುದು ಸರಿಯಲ್ಲ. ನಾವು ಪ್ರತಿ ಸೋಮುವಾರ ಮತ್ತು ಶುಕ್ರವಾರ ತಪ್ಪದೇ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಫಾಲೋ ಅಪ್ ಚಿಕಿತ್ಸೆಗಾಗಿ ಕರೆದುಕೂಂಡು ಹೋಗಿ ಬರುತ್ತಿದ್ದೆ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ , ನನ್ನ ಗಂಡ ತಲೆ ನೋವು ಹೆಚ್ಚಾಗುತ್ತಿದೆ, ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳುತ್ತಿದ್ದರು, ಎಂದು ನಾನು ಹೇಳಿರುವುದಿಲ್ಲ.

5. ನಾನು ನನ್ನ ತಾಯಿಯ ಮನೆಯಲ್ಲಿದ್ದು, ಅಲ್ಲಿಂದ ಗಾರ್ಮೆಂಟ್ಸ್ ಗೆ ಹೋಗುತ್ತಿದ್ದರಿಂದ ಆರೋಪಿ "ಬೇಡ ಎಂದು ಹೇಳುತ್ತಿದ್ದ ಎನ್ನುವುದು ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮಿಬ್ಬರ ನಡುವೆ ಜಗಳವಾಗುತ್ತಿತ್ತು ಎನ್ನುವುದು ಸರಿಯಲ್ಲ. ಬನ್ನಯ್ಯನ ಹಟ್ಟಿಯಲ್ಲಿರುವ ನಮ್ಮ ಭಾಗಾಂಶಕ್ಕೆ ಬಂದಿರುವ ಮನೆಯಲ್ಲಿ ಎಂದು ಇರು

ಎಂದು ಆರೋಪಿ ಹೇಳುತ್ತಿದ್ದರು ಎನ್ನುವುದು ಸರಿಯಲ್ಲ. ಬನ್ನಯ್ಯನ ಹಟ್ಟಿಯಲ್ಲಿ ನಮ್ಮ ಮನೆ ಇರುವ ರಸ್ತೆಯಲ್ಲಿ ಅನೇಕ ಮನೆಗಳು ಇವೆ ಎನ್ನುವುದು ಸರಿ . ಅಲ್ಲಿ ಸುಮಾರು 20 ಮನೆಗಳಿವೆ. ಸಂಜೆಯ ಹೊತ್ತು ಅಲ್ಲಿ ಮಕ್ಕಳು ಆಟವಾಡುತ್ತಿರುತ್ತಾರೆ ಎನ್ನುವುದು ಸರಿ. ದೊಡ್ಡವರು ಜಗುಲಿಯ ಮೇಲೆ ಕುಳಿತು ಮಾತನಾಡುತ್ತಿರುತ್ತಾರೆ ಎನ್ನುವುದು ಸರಿ.

6. ಘಟನೆ ನಡೆದ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದೆ. ಮಕ್ಕಳು ಜೋರಾಗಿ ಕಿರುಚಿಕೊಂಡ ಶಬ್ದ ಕೇಳಿ ಬಂತು. ಆಗ ನಾನು ಮನೆಯಿಂದ ಹೊರಕ್ಕೆ ಓಡಿ ಬಂದೆ. ಆಗ ನನ್ನ ಅತ್ತೆ ಬಿದ್ದು ಹೋಗಿದ್ದರು. ಅಲ್ಲಿ ಸೇರಿದ್ದ ಜನರನ್ನು ನಾನು ನೋಡಲು ಹೋಗಲಿಲ್ಲ. ನಾನು ನಮ್ಮ ಅತ್ತೆಯನ್ನು ತೊಡೆಯ ಮೇಲೆ ಹಾಕಿಕೊಂಡು ನೀರನ್ನು ಕುಡಿಸಿದೆ.

7. ನೀವು ಪೋಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ , ನಾನು ಒಳಗಿನಿಂದ ಓಡಿ ಹೊರ ಬಂದಾಗ , ಅತ್ತೆ ಸತ್ತು ಬಿದ್ದಿದ್ದರು, ಎಂದು ಹೇಳಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ , ಸತ್ತಿದ್ದರೋ ಇಲ್ಲವೋ ನನಗೆ ಗೊತ್ತಾಗಲಿಲ್ಲ , ತೊಡೆಯ ಮೇಲೆ ಹಾಕಿಕೊಂಡು ನೀರು ಕುಡಿಸಿದೆ ಎನ್ನುತ್ತಾರೆ. ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಅಲ್ಲಿ ಸೇರಿದ್ದ ಅಕ್ಕ ಪಕ್ಕದವರ ಹೆಸರುಗಳನ್ನು ಹೇಳಿರುತ್ತೇನೆ. ಅಲ್ಲಿ ಅಕ್ಕ ಪಕ್ಕದವರು, ಅಜ್ಜಿ ಜಾರಿ ಬಿದ್ದರು ಎಂದು ಹೇಳಿದರು, ಎನ್ನುವುದು ಸರಿಯಲ್ಲ. ಅಲ್ಲಿದ್ದ ಮಕ್ಕಳೂ ಸಹ , ಅಜ್ಜಿ ಜಾರಿ ಬಿದ್ದರು ಎಂದು ತಿಳಿಸಿದರು ಎನ್ನುವುದು ಸರಿಯಲ್ಲ.

8. ಅದೇ ದಿನ ಸಂಜೆ 06.00 ಗಂಟೆಗೆ ಪೋಲೀಸರು ಅಲ್ಲಿಗೆ ಬಂದರು. ಪೋಲೀಸರು ಶವವನ್ನು ತೆಗೆದುಕೊಂಡು ಹೋದರು. ಆರೋಪಿಗೂ ಮತ್ತು ನನಗೂ ವೈ

ಮನಸ್ಸು ಇರುವುದರಿಂದ , ಮಕ್ಕಳು ನನಗೆ , ಆರೋಪಿ ದೊಣ್ಣೆಯಿಂದ ಅಜ್ಜಗೆ ಹೊಡೆದ ಎಂದು ಹೇಳಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

9. ಆರೋಪಿಯನ್ನು ಕರೆದುಕೊಂಡು ಹೋಗಿ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನಾನು ಕೊಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ಸ್ಥಳದಲ್ಲಿ ದೊಣ್ಣೆ ಬಳೆ ಚೂರುಗಳು ಬಿದ್ದಿರಲಿಲ್ಲ ಎನ್ನುವುದು ಸರಿಯಲ್ಲ. ಆ ದೊಣ್ಣೆ ಮತ್ತು ಬಳೆ ಚೂರುಗಳನ್ನು ಹಿಂದಿನ ಹಿಯಂರಿಂಗ್ ದಿನಾಂಕದಂದು ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡಿದ್ದೆ ಎನ್ನುವುದು ಸರಿ. ನನ್ನ ಅತ್ತೆ ಜಾರಿ ಬಿದ್ದು ಮೃತ ಪಟ್ಟಿರುತ್ತಾರೆ ಎನ್ನುವುದು ಸರಿಯಲ್ಲ. ನನಗೂ ಮತ್ತು ಆರೋಪಿಗೂ ವೈ ಮನಸ್ಸು ಇರುವುದರಿಂದ , ಆರೋಪಿ ದೊಣ್ಣೆಯಿಂದ ಹೊಡೆದು ಅತ್ತೆಯನ್ನು ಸಾಯಿಸಿದ್ದಾನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮತ್ತು ನನ್ನ ಅತ್ತೆ ನಡುವೆ ಮಾತುಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ನನ್ನ ಅತ್ತೆ ಭಾವನ ಮನೆಯಲ್ಲಿದ್ದರು ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**